ಶ್ರೀ ಜಿ. ಎನ್. ರೆಡ್ಡಿ.—ಒಂದು ಜಿಲ್ಲೆಗೆ ಎರಡು ವಿದ್ಯಾಪೀಠಗಳನ್ನು ಕೊಟ್ಟರೆ, ನಮ್ಮ ಜಿಲ್ಲೆಗೂ ಎರಡು ವಿದ್ಯಾಪೀಠಗಳನ್ನು ಕೊಡುತ್ತೀರಾ ?

ಶ್ರೀ ಜಿ. ಬಿ. ಶಂಕರ್‌ರಾವ್.—ನಮಗಿರತಕ್ಕ ವಿದ್ಯಾಪೀಠಗಳು ಕೇವಲ ೧೩ ಮಾತ್ರ ಇನ್ನುಳಿದ ೭ ಜಿಲ್ಲೆಗಳಲ್ಲೂ ಈ ವಿದ್ಯಾಪೀಠಗಳನ್ನು ಸ್ಥಾಪನೆ ಮಾಡಿದಮೇಲೆ ಯಾವ ಜಿಲ್ಲೆಗಾದರೂ ಎರಡೆರಡು ವಿದ್ಯಾಪೀಠಗಳನ್ನು ಕೊಟ್ಟರೆ ಆಗ ನಿಮ್ಮ ಈ ಪ್ರಶ್ನೆಯನ್ನು ಪರಿಶೀಲಿಸುತ್ತೇವೆ.

Violation of P C R Act.

98 SRI M. MADAIAH (Santhemaranahalli).—Will the Chief Minister be pleased to state :—

(a) the number of complaints received regarding discrimination of Caste Feelings in Mysore District and in Chamarajanagar Police Circle ;

(b) the number of casses registered out of them ;

(c) the number of cases charge sheeted in the Court of Low ;

(d) the number of cases where accused were convicted ;

(e) the number of complaints un-registered and reasons there fore ;

(f) the number of complaints though registered which were not charge-sheeted. If so the reasons thereof ; Information may please be furnished separately in respect of Mysore District and Chamarajnagar ?

SRI R. GUNDU RAO (Chief Minister).—

(a) Fifty-Two complaints have been received in Mysore District. including Chamarajnagar Circle, from 1-1-1981 to 31-3-1981.

The details are as follows :—

	1980	1981
Mysore District (Except Chamarajnagar Circle) ...	30	7
Chamarajnagar Circle ...	8	7
	38	14

(b) On all the complaints cases have been registered.

(c) —

Sl. No.	Unit	No. of Cases 1980	Charge sheeted 1981
1.	Mysore District (Except Chamarajnagar Circle)	22	...
2.	Chamarajnagar	4	...
		26	...

(d) None of the cases have ended in conviction so far.

(e) Does not arise in view of reply to clause (b).

(f) Out of 33 cases registered during 1980 in Mysore District, in 10 cases charge-sheet have not been filed 4 cases pertain to Chamarajnagar Circle and the remaining 6 to other areas of Mysore District.

During the year 1981, 14 cases are reported. 7 cases pertain to Chamarajnagar Circle and the remaining 7 cases pertain to the other areas of Mysore District. All the cases are under investigation.

ಶ್ರೀ ಎಂ. ಮಾದಯ್ಯ.—ಸ್ವಾಮಿ, ನಾನು ಕೇಳಿರುವ ಪ್ರಶ್ನೆಯಲ್ಲಿ "ಈ ಕಾನೂನು ಜಾರಿಗೆ ಬಂದಾಗಿನಿಂದ ಎಷ್ಟು ಕೇಸುಗಳನ್ನು ದಾಖಲು ಮಾಡಿಕೊಂಡಿದ್ದೀರಿ" ಎಂದು ಕೇಳುವುದಕ್ಕೆ ತಾವು ತಾ॥ ೧-೧-೧೯೮೦ ರಿಂದ ೩೧-೩-೧೯೮೧ ವರೆಗೆ ಎಷ್ಟು ಕೇಸುಗಳನ್ನು ದಾಖಲು ಮಾಡಿಕೊಳ್ಳಲಾಗಿದೆ ಎಂಬುದನ್ನು ಹೇಳಿದ್ದೀರಿ. ಈ ಹಿಂದೆ ೮ ಕೇಸುಗಳ ಬಗ್ಗೆ ಫಿರ್ಯಾದು ಬಂದಿದ್ದರೂ ಅವುಗಳನ್ನು ಏತಕ್ಕೆ ದಾಖಲು ಮಾಡಿಕೊಳ್ಳಲಿಲ್ಲ? ಅವುಗಳ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಆಗದಿರುವ ಉದ್ದೇಶದಿಂದ ಏನಾದರೂ ಕೈ ಬಿಟ್ಟಿದ್ದೀರಾ? ಅಥವಾ ಬೇರೆ ಉದ್ದೇಶದಿಂದ ಕೈಬಿಟ್ಟಿದ್ದೀರಾ? ಎಂಬುದನ್ನು ತಿಳಿಸಬೇಕು.

ಶ್ರೀ ಆರ್. ಗುಂಡೂರಾವ್.—ತಾವು ಕೇಳಿರತಕ್ಕ ಪ್ರಶ್ನೆಗೆ ಸರಿಯಾಗಿ ಉತ್ತರವನ್ನು ಹೇಳಿದ್ದೇವೆ ತಾ॥ ೧-೧-೧೯೮೦ ರಿಂದ ೩೧-೩-೧೯೮೧ರ ವರೆಗೆ ೫೨ ದೂರುಗಳು ಚಾಮರಾಜನಗರ ಪಲಯ ವನ್ನೊಳಗೊಂಡಂತೆ ಮೈಸೂರು ಜಿಲ್ಲೆಯಲ್ಲಿ ಬಂದಿದ್ದುವು. ಇದರ ಪೈಕಿ ಎಷ್ಟು ಕೇಸುಗಳನ್ನು ಹಾಕಲಾಗಿದೆ ಎಂಬುದನ್ನೂ ಹೇಳಿದ್ದೇವೆ. ಛಾರ್ಜ್‌ಷೀಟ್ ಎಷ್ಟಕ್ಕೆ ಹಾಕಿಲ್ಲ ಎಂಬುದನ್ನೂ ಹೇಳಿದ್ದೇವೆ ಮತ್ತೆ ಇನ್ನೇನು ಬೇಕು ತಮಗೆ ?

ಶ್ರೀ ಎಂ. ಮಾದಯ್ಯ.—ನಾನು ಪ್ರಶ್ನೆ ಕೇಳಿದ ತಾರೀಖಿನಿಂದ ಇದುವರೆಗೆ ಎಷ್ಟು ಕೇಸುಗಳು ಬಂದಿವೆ ಎಂದು ನಾನು ಕೇಳಿದ್ದೇನೆ. ತಾವು ೧೫ ತಿಂಗಳಿಗೆ ಮಾತ್ರ ಲೆಕ್ಕ ಕೊಟ್ಟಿದ್ದೀರಿ. ಆದರ ಹಿಂದಿನ ತಿಂಗಳುಗಳಲ್ಲಿ ಬಂದ ಕೇಸುಗಳ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಆಗದೇ ಇದ್ದುದರಿಂದ ಅವುಗಳನ್ನು ಕೈಬಿಟ್ಟಿದ್ದೀರಾ? ಎಂಬುದನ್ನು ತಿಳಿಸಬೇಕು.

ಶ್ರೀ ಆರ್. ಗುಂಡೂರಾವ್.—ನೀವು ಪ್ರಶ್ನೆ ಕೇಳಿರುವುದು "ಮೈಸೂರು ಜಿಲ್ಲೆಯಲ್ಲಿ ಮತ್ತು ಚಾಮರಾಜನಗರ ಪೋಲೀಸ್ ಸರ್ಕಲ್ಲಿಗೆ ಸೇರಿದ ಪ್ರದೇಶದಲ್ಲಿ ಇದುವರೆಗೆ ಜಾತೀಯತೆಯನ್ನು ಅಭ್ಯಾಸಿಸುತ್ತಿದ್ದುದಕ್ಕಾಗಿ ಬಂದ ಫಿರ್ಯಾದುಗಳೆಷ್ಟು? ಎಂದು. ಇದಕ್ಕೆ ಬದಲು ಈ ಕಾನೂನು ಜಾರಿಗೆ ಬಂದಾಗಿನಿಂದ ಇದುವರೆಗೆ" ಎಂದು ಕೇಳಿದ್ದಿದ್ದರೆ ಆದಕ್ಕೆ ಸರಿಯಾಗಿ ನಾವು ಉತ್ತರವನ್ನು ಕೊಡುತ್ತಿದ್ದೆವು.

ಶ್ರೀ ಎಂ. ಮಾದಯ್ಯ.—ತಮಗೆ ಅನುಕೂಲವಾಗುವಂತೆ ಈ ಪ್ರಶ್ನೆಯನ್ನು ಪ್ರಿಂಟ್ ಮಾಡಿಸಿಕೊಂಡು ಉತ್ತರ ಕೊಟ್ಟಿದ್ದೀರಿ. ತಾವು ಕೊಟ್ಟಿರತಕ್ಕ ಒಂದು ಉತ್ತರದಲ್ಲಿ ೩೮ ಎಂದು ಕೊಟ್ಟಿದ್ದೀರಿ, ಇನ್ನೊಂದು ಕಡೆ ೨೬ ಎಂದು ಕೊಟ್ಟಿದ್ದೀರಿ. ಇದರಲ್ಲಿ ಯಾವುದು ಸರಿ?

ಶ್ರೀ ಆರ್. ಗುಂಡೂರಾವ್.—ಚಾಮರಾಜನಗರ ಪೊರತುಪಡಿಸಿ ಎಷ್ಟು, ಮತ್ತು ಚಾಮರಾಜನಗರದಲ್ಲಿ ಎಷ್ಟು, ಎಂದು ಸ್ಪಷ್ಟವಾಗಿ ಹೇಳಿದ್ದೇವೆ.

ಶ್ರೀ ಎಂ. ಮಾದಯ್ಯ.—ಚಾಮರಾಜ ನಗರವನ್ನು ಬಿಟ್ಟು ೨೨ ಮತ್ತು ಚಾಮರಾಜನಗರದ್ದು ೪ ಎಂದು ಹೇಳಿದ್ದೀರಿ. ಇನ್ನೊಂದು ಕಡೆ ಚಾಮರಾಜ ನಗರದ್ದು ೮ ಎಂದು ಹೇಳಿದ್ದೀರಿ ಇದು ಸರಿಯಾಗಿ ತಾಳೆ ಆಗುತ್ತಿಲ್ಲ.

ಶ್ರೀ ಆರ್. ಗುಂಡೂರಾವ್.—ಇದರಲ್ಲಿ ೨ ಚಾಮರಾಜನಗರಕ್ಕೆ ಬರುವುದಿಲ್ಲ ಎಂದು ಬಿಡಲಾಗಿದೆ.

ಶ್ರೀ ಎಂ. ಮಾದಯ್ಯ.—ಒಟ್ಟು ೨೬ ಕೇಸುಗಳಿಗೆ ಭಾರ್ಜ್ ಷೀಟ್ ಹಾಕಿಲ್ಲ. ಇದಕ್ಕೆ ಸಂಬಂಧ ಪಟ್ಟ ಅಧಿಕಾರಿಗಳ ತಾತ್ಸಾರ ಮನೋಭಾವನೆ ಕಾರಣವೆ? ಅಥವಾ ಅಲ್ಲಿ ಪೆಡ್ಯೂಲ್ಡ್ ಕ್ಯಾಸ್ಟ್‌ನವರು ಇದ್ದಾರೆ ಅವರಿಗೆ ಅನುಕೂಲ ಮಾಡಬಾರದು ಎಂದು ಏನಾದರೂ ಇದೆಯೆ?

ಶ್ರೀ ಆರ್. ಗುಂಡೂರಾವ್.—ಆ ರೀತಿ ಏನೂ ಇಲ್ಲ. ಆದರೆ ಇದು ಇನ್ನೂ ತನಿಖೆಮಟ್ಟದಲ್ಲೇ ಇದೆ.

ಶ್ರೀ ಎಂ. ಮಾದಯ್ಯ.—ತನಿಖೆ ಮಾಡುವುದಕ್ಕೆ ವರ್ಷಗಟ್ಟಲೆ ಬೇಕಾಗುತ್ತದೆಯೆ ? ದಯವಿಟ್ಟು ಇನ್ನಾದರೂ ಈ ರೀತಿ ವರ್ಷಗಟ್ಟಲೇ ತನಿಖೆಗಾಗಿ ಕಾಲವನ್ನು ತೆಗೆದುಕೊಳ್ಳುವುದನ್ನು ತಪ್ಪಿಸಬೇಕು.

ಅಧ್ಯಕ್ಷರು.—ತಮ್ಮ ಪ್ರಶ್ನೆ ನನ್ನಕಡೆ ಇದೆ. ಇದನ್ನು ತಾ॥ ೧೬-೩-೧೯೮೧ರಲ್ಲಿ ತಾವು ಕಳುಹಿಸಿಕೊಟ್ಟಿದ್ದೀರಿ. ಆದರಲ್ಲಿ ಮೈಸೂರು ಜಿಲ್ಲೆಯಲ್ಲಿ ಮತ್ತು ಚಾಮರಾಜನಗರದ ಪೋಲೀಸ್ ಸರ್ಕಲ್ಲಿಗೆ ಸೇರಿದ ಪ್ರದೇಶದಲ್ಲಿ ಇದುವರೆಗೆ ಜಾತೀಯತೆಯನ್ನು ಆಭ್ಯಸಿಸುತ್ತಿದ್ದಕ್ಕಾಗಿ ಬಂದ ಫಿರ್ಯಾದು ಗಳೆಷ್ಟು ಎಂದು ಕೇಳಿದ್ದೀರೇ ಹೊರತು ಈ ಕಾನೂನು ಜಾರಿಗೆ ಬಂದಲಾಗಾಯ್ತು ಎಂದು ನೀವು ಕೇಳಿಲ್ಲ.

ಶ್ರೀ ಎಂ. ಮಾದಯ್ಯ.—ಸ್ವಾಮಿ, ಯಾವ ತಾರೀಖಿನಿಂದ ಎಂದು ನಾನು ಕೇಳಿದಿದ್ದರೂ ಪರವಾಗಿಲ್ಲ. ಆದರೆ ವರ್ಷಗಟ್ಟಲೆ ತನಿಖೆಯಾಗುವುದನ್ನು ದಯವಿಟ್ಟು ತಪ್ಪಿಸಬೇಕು.

ಶ್ರೀ ಆರ್. ಗುಂಡೂರಾವ್.—ಆಗಬಹುದು.

Electrification facilities to the villages of Malavalli Taluk.

238. SRI S.S. ARAKERI (Balloli).—Will the Minister of State for Power be pleased to state.—

(a) whether it is a fact that many representations have been given to the K.E.B. by people of Mariyur village, Malavalli Taluk, Mandya District for electrification of Village since 1975 ;

(b) whether it is a fact that the Minister had assured on the floor of the house to provide electrification to the said village while replying to the Starred Questions asked by Mr. Jaya Prakash Narayan, Ex-M.L.A., in the year 1977 (S.Q. No. 303, 539 *vide* page 12 of the L.A., Proceedings volume No. LVI (Fifth Assembly) dated 29th June 1977 ;

(c) if so, the reason for not fulfilling the assurance so far ;

(d) the action taken by the Government in this behalf ?

SRI G. H. ASWATHA REDDY (Minister of State for Power).—

(a) Yes.

(b) Yes, the then Minister of State for Power had assured to examine the proposal.

(c) The village could not be electrified as it did not satisfy the prescribed norms.